ಕಾರ್ಮಿಕ ಸಚಿವರ ಪರವಾಗಿ ಸ್ವೀಕಾರ ಮಾಡಿದ್ದೇನೆ. ನಾಳೆ ಅವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

8) ವಿಷಯ : ರಾಮತಾಳ್ ಮರೋಳ್ ಏತ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿ ಆಗಿರುವ ಕುರಿತು ಕ್ರಮ ಜರುಗಿಸುವ ಬಗ್ಗೆ.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ):- ಮಾನ್ಯ ಅಧ್ಯಕ್ಷರೆ, ನನಗೆ ನಾಲ್ಕು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊಟ್ಟಮೊದಲು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹುನಗುಂದ ತಾಲ್ಲೂಕಿನ Ramthal [Marol] ಏತ ನೀರಾವರಿ ಯೋಜನೆ 2003ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಪ್ರಾರಂಭಗೊಂಡಿದ್ದು, ಇವತ್ತಿನವರೆಗೂ ಆ ನೀರಾವರಿ ಯೋಜನೆ ಪೂರ್ಣಗೊಂಡಿಲ್ಲ ಮತ್ತು ಅಲ್ಲಿ ಗುಣಮಟ್ಟದ ಕೆಲಸಗಳಾಗಿಲ್ಲ. ಅಲ್ಲಿ ಸಂಪೂರ್ಣವಾಗಿ ಕಳಪೆ ಗುಣಮಟ್ಟದ ಕಾಮಗಾರಿಯಾಗಿದೆ. ದಯವಿಟ್ಟು ನಾನು ಸದನಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಸಂಪೂರ್ಣವಾಗಿ ಆ ಏತ ನೀರಾವರಿ ಯೋಜನೆ ಕಳಪೆ ಗುಣಮಟ್ಟದ್ದಾಗಿರುವುದರಿಂದ, ಅದರ ಬಗ್ಗೆ ಸೂಕ್ತ ತನಿಖೆ ಮಾಡಿಸಬೇಕು. ನಮ್ಮ ಹುನಗುಂದ ತಾಲ್ಲೂಕಿನ ರೈತರಿಗೆ ಆ ಏತ ನೀರಾವರಿ ಯೋಜನೆ ಬಹಳ ಮಹತ್ವದ್ದಾಗಿದೆ. ಆದ್ದರಿಂದ, ಅದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿಸಿ, ಆಗಿರುವಂತಹ ನಷ್ಟವನ್ನು ತುಂಬಿ, ಸರಿಯಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು]:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು Ramthal [Marol] ಏತ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ಪ್ರಸ್ತಾಪಿಸಿರುವುದರ ಬಗ್ಗೆ ನಾಳೆ ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು :- ಮುಂದಿನ ವಿಷಯವನ್ನು ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ಪ್ರಸ್ತಾಪಿಸಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಸದನದಲ್ಲಿ ಇಲ್ಲ.

ಅಧ್ಯಕ್ಷರು :– ಈಗ ನೀವು ಕೇಳುತ್ತೀರೋ? ಇಲ್ಲವೋ?

9) **ವಿಷಯ : ಸಕಲೇಶಪುರ ಬಾಚಿಹಳ್ಳಿ ಗ್ರಾಮದ ಹಾಲಪ್ಪನವರ ಕೊಲೆ ಮಾಡಿರುವ ಪ್ರಭಾವಿ ಆರೋಪಿಗಳನ್ನು ಬಂಧಿಸುವ ಬಗ್ಗೆ.**

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :– ಮಾನ್ಯ ಅಧ್ಯಕ್ಷರೆ, ಮೊನ್ನೆ ಇತ್ತೀಚೆಗೆ ದಿನಾಂಕ 4.6.2013ರಂದು ನನ್ನ ಕ್ಷೇತ್ರದ ಬಿಸಲೆ ಗ್ರಾಮದಲ್ಲಿ ಗಡಿ ಚೌಡೇಶ್ವರಿ ಎಂಬ ದೇವಸ್ಥಾನವೊಂದಿದೆ. ಅದು ಅರಣ್ಯ ವಲಯದಲ್ಲಿ ಬರುತ್ತದೆ.

ಅಧ್ಯಕ್ಷರು :– ಆಯಿತು, ಅಲ್ಲಿ ಕೊಲೆಯಾಗಿದೆ. ನಿಮಗೆ ಏನು ಆಗಬೇಕಾಗಿದೆ ಎಂದು ಕೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ :– ಅಲ್ಲಿ ಹೋಗಿ ಪೂಜೆ ಮಾಡತಕ್ಕ ವಿಷಯದಲ್ಲಿ ಎರಡು ಗುಂಪುಗಳ ನಡುವೆ ಗಲಾಟೆಯಾಗಿದೆ. ಆ ಗಲಾಟೆಯಲ್ಲಿ ನನ್ನ ಸಕಲೇಶಪುರ ತಾಲ್ಲೂಕಿನ ಬಾಚಿಹಳ್ಳಿ ಗ್ರಾಮದ ಹಾಲಪ್ಪ ಎಂಬುವವರ ಕೊಲೆಯಾಗಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ forest departmentನ watcher ಒಬ್ಬನನ್ನು ಬಂಧಿಸಿದ್ದಾರೆ. ಆದರೆ ಅಲ್ಲಿ ಆಗಿರತಕ್ಕಂಥ ಸನ್ನಿವೇಶವೇ ಬೇರೆಯಾಗಿದೆ. ಪಕ್ಕದ ಸುಬ್ರಮಣ್ಯದವರೂ ಕೂಡ ಅಲ್ಲಿಗೆ ಬಂದಿದ್ದರು. ಅವರವರ ಮಧ್ಯೆ ಹೊಡೆದಾಟವಾಗಿ ಅವನು ಸತ್ತಿದ್ದಾನೆ. ಅಲ್ಲಿ ನಿಜವಾದ ಅಪರಾಧಿಗಳನ್ನು/ಆರೋಪಿಗಳನ್ನು ಬಂಧಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಆದ್ದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ನಿಜವಾದ ಆರೋಪಿಗಳು ಯಾರಿದ್ದಾರೋ, ಅವರನ್ನು ಬಂಧಿಸಬೇಕು. ಅಲ್ಲಿ ಅವರು ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಅವರ ಪ್ರಭಾವಕ್ಕೆ ಸರ್ಕಾರ ಮಣಿಯಬಾರದು ಎನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು] :– ಮಾನ್ಯ ಅಧ್ಯಕ್ಷರೆ, ಅವರ ಊರಿನಿಂದ ನನ್ನ ಹತ್ತಿರವೂ ಕೂಡ ಬಂದು ಮನವಿಯನ್ನು ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೂ ಬಂದಿದೆ. ಆದರೆ